**<u>ಸಾಕ್ಷಿಯನ್ನು ದಿನಾಂಕಃ 09.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ಆರೋಪಿಗಳು ಹಲೆ ಮಾಡಲು ಉಪಯೋಗಿಸಿದ ಮಚ್ಚು ಮತ್ತು ಕಬ್ಬಿಣದ ರಾಡನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಮಚ್ಚು ಮತ್ತು ಕಬ್ಬಿಣದ ರಾಡನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ಮುದ್ದೆ ಮಾಲು 1 ಮತ್ತು 2 ಎಂದು ಗುರುತಿಸಲಾಯಿತು. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ದಿವಸ 1 ಮತ್ತು 3 ನೇ ಆರೋಪಿಗಳು ಹಾಜರಿದ್ದು ಉಳಿದ ಆರೋಪಿಗಳು ಗೈರು ಹಾಜರಿರುತ್ತಾರೆ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸ.ಸ.ಅ ರವರಿಂದಃ</u>**

ದಿಃ30.11.2011 ರಂದು ಬೆಳಿಗ್ಗೆ 8 ಗಂಟೆ ಸಮಯದಲ್ಲಿ ನಾನು ಮತ್ತು ಚಾ.ಸಾ-1 ಇಬ್ಬರು ಸೇರಿ ನಮ್ಮ ಮಗಳು ಮನೆ ಕಟ್ಟಲು ಹಾಕಿರುವ ಬೇಸ್ ಮೆಂಟ್ ಹತ್ತಿರ ಹೋದಾಗ ನಮ್ಮ ಮಗಳು ತಳಪಾಯಕ್ಕೆ ನೀರು ಹಾಕುತ್ತಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ಆರೋಪಿಗಳು 3 ಅಡಿ ಜಾಗ ಬಿಟ್ಟು ತಳಪಾಯ ಹಾಕಿಕೊಳ್ಳಿ ಎಂದು ಕೂಗಾಡಿರುತ್ತಾರೆ ಎಂದರೆ ಸರಿ. ಆಗ ನಾನು ಮತ್ತು ಚಾ.ಸಾ-1 33 ಅಡಿ ಲೆಕ್ಕಚಾರವಾಗಿ ನಮಗೆ ಸೇರಿದ್ದು ಎಂದು ಹೇಳಿದ್ದಕ್ಕೆ ಆರೋಪಿಗಳು ನಮ್ಮ ಜೊತೆ ಜಗಳ ತೆಗೆದು ನನ್ನನ್ನು

ಮುಂದೆ ಹೋಗದಂತೆ ತಬ್ಬಿ ಹಿಡಿದುಕೊಂಡಾಗ 3 ನೇ ಮಚ್ಚಿನಿಂದ ನನ್ನ ಬಲ ಕೈ ಗೆ ಹೊಡೆದಿರುತ್ತಾರೆ ಎಂದರೆ ನಾನು ಬಲ ಕೈ ನಿಂದ ತಡೆಯಲು ಹೋದಾಗ ನನ್ನ ಎಡ ಕೈ ಗೆ ಬಿದ್ದಿರುತ್ತದೆ. ಆ ಸಂದರ್ಭದಲ್ಲಿ 1 ನೇ ಆರೋಪಿ ನನ್ನ ಮಗಳಾದ ರೂಪಾರವರ ಮುಂದಲೆ ಹಿಡಿದುಕೊಂಡು ಕೈಗಳಿಂದ ಮೈ ಕೈ ಗೆ ಹೊಡೆದಿರುತ್ತಾರೆ ಎಂದರೆ ಸರಿ. ಆ ಸಂದರ್ಭದಲ್ಲಿ ಚಾ.ಸಾ–1 ರವರು ಹೋದಾಗ 1 ನೇ ಆರೋಪಿ ಕೈಯಿಂದ ಚಾ.ಸಾ–1 ರವರನ್ನು ರಭಸವಾಗಿ ತಳ್ಳಿ ಕೆಳಕ್ಕೆ ಬೀಳಿಸಿರುತ್ತಾರೆ ಎಂದರೆ ಸರಿ. ಆ ಸಂದರ್ಭದಲ್ಲಿ 4 ಮತ್ತು 5 ನೇ ಆರೋಪಿಗಳು ಇವರನ್ನು ಬಿಡಬೇಡಿ ಹೊಡೆಯಿರಿ ಎಂದು ಕೂಗಾಡಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. 5 ನೇ ಆರೋಪಿ ಕಬ್ಬಿಣದ ರಾಡಿನಿಂದ ನನ್ನ ಎಡ ಕೆನ್ನೆಗೆ ಹೋಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ನಂಜನಗೂಡು.**